ಪದ್ಯ –೮ ಕೆಮ್ಮನೆ ಮೀಸೆವೊತ್ತೆನೇ – ಪಂಪ (ಪದ್ಯದ ಹೊಸಗನ್ನಡ ರೂಪ)

ಪೀಠಿಕೆ

ಪಾಂಡವರು ಕೌರವರಿಗೆ ಶಸ್ತ್ರಾಭ್ಯಾಸ ಕಲಿಸಿದ ಗುರುಗಳಾದ ದ್ರೋಣಾಚಾರ್ಯರೂ ಹಾಗೂ ಪಾಂಚಾಲ ದೇಶದ ದೊರೆ ದ್ರುಪದನೂ ಒಂದೇ ಗುರುಗಳ ಬಳಿ ವಿದ್ಯೆಕಲಿತಿರುತ್ತಾರೆ. ಸಹಪಾಠಿಗಳಾಗಿದ್ದಾಗ ಇಬ್ಬರಲ್ಲೂ ತುಂಬಾ ಸ್ನೇಹವಿರುತ್ತದೆ. ಆ ಸ್ನೇಹದಿಂದಲೇ ದ್ರುಪದ ನಾನು ಪಾಂಚಾಲಕ್ಕೆ ರಾಜನಾದಮೇಲೆ ನಿನಗೆ ಅರ್ಧರಾಜ್ಯ ಕೊಡುತ್ತೇನೆ ಎಂದು ದ್ರೋಣನಿಗೆ ಆಶ್ವಾಸನೆ ಕೊಟ್ಟಿರುತ್ತಾನೆ. ಭಾಷೆ ಕೊಟ್ಟ ದ್ರುಪದ ಮರೆತರೂ ದ್ರೋಣ ಮರೆಯುವುದಿಲ್ಲ. ಇಬ್ಬರ ವಿದ್ಯಾಭ್ಯಾಸ ಮುಗಿದು ಬದುಕಿನ ದಾರಿ ಬೇರೆಬೇರೆಯಾದ ಮೇಲೆ ಒಂದು ದಿನ ದ್ರೋಣ ದ್ರುಪದನನ್ನು ಹುಡುಕಿ ಪಾಂಚಾಲಕ್ಕೆ ಬರುತ್ತಾನೆ. ಆಗ ದ್ರುಪದ ಚಕ್ರವರ್ತಿಯಾಗಿರುತ್ತಾನೆ. ಹಾಗೂ ದ್ರೋಣನಿಗೆ ಮದುವೆಯಾಗಿ ಬಹಳ ಬಡತನದಲ್ಲಿರುತ್ತಾನೆ.

ದ್ರುಪದನಿಗೆ ತಮ್ಮ ಹಳೆಯ ಗೆಳೆತನವನ್ನು ಜ್ಞಾಪಿಸಿ ಒಂದಿಷ್ಟು ಸಹಾಯವನ್ನು ಕೇಳಬೇಕೆಂದು ದ್ರೋಣನ ಇಚ್ಛೆ. ಅದಕ್ಕಾಗಿ ಆತ ಮಹಾರಾಜನಿಗೆ ತಮ್ಮ ಹಿಂದಿನ ಗೆಳೆತನವನ್ನು ಅರ್ಧರಾಜ್ಯ ಕೊಡುತ್ತೇನೆಂದ ಆಶ್ವಾಸನೆಯನ್ನೂ ಚಕ್ರವರ್ತಿಗೆ ನೆನಪಿಸುತ್ತಾನೆ. ಅಧಿಕಾರ ಹಾಗೂ ಹಣದ ಮದದಲ್ಲಿ ಮುಳುಗಿದ್ದ ದ್ರುಪದನಿಗೆ ಹಳೆಯದ್ಯಾವುದೂ ನೆನಪಿರುವುದಿಲ್ಲ. ಆ ಸಂದರ್ಭದಲ್ಲಿ

ದ್ರೋಣ ಮತ್ತು ದ್ರುಪದರ ನಡುವೆ ನಡೆಯುವ ಸಂಭಾಷಣೆಯನ್ನು ಈ ಪದ್ಯ ಭಾಗದಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಸಂಗ್ರಹಿತ ಪದ್ಯದ ಹೊಸಗನ್ನಡ ರೂಪ

ವ|| ದ್ರೋಣಂ ತನಗೆ ಬಡತನಮಡಸೆ ಅಶ್ವತ್ಥಾಮನೊಡಗೊಂಡು ನಾಡಂನಾಡಂ ತೊಳಲ್ದು ಪರಶುರಾಮನಲ್ಲಿಗೆ ವಂದಂ ಅಂತು ವಲ್ಕಲಾವೃತಕಟಿತಟನುಮಾಗಿರ್ದ ಜಟಾಕಲಾಪನುಮಾಗಿ ತಪೋವನಕ್ಕೆ ಪೋಪ ಭಾರ್ಗವಂ ದ್ರವ್ಯಾರ್ಥಿಯಾಗಿ ಬಂದ ಕುಂಭಸಂಭವನಂ ಕಂಡು ಕನಕಪಾತ್ರಕ್ಕುಪಾಯಮಿಲ್ಲಪ್ಪುದರಿಂ

ಮೃತ್ಪಾತ್ರದೊಳರ್ಘ್ಯಮೆತ್ತಿ ಪೂಜಿಸಿ –

ಅರ್ಥ :

ದ್ರೋಣನು ತನಗೆ ಬಡತನವುಂಟಾಗಲು ಅಶ್ವತ್ಥಾಮನನ್ನೂ ಕರೆದುಕೊಂಡು ದೇಶದೇಶಗಳನ್ನೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದನು .ಈಗ ನಾರು ಮಡಿಯಿಂದ ಕೂಡಿದ ನಡುವನ್ನುಳ್ಳವನೂ ಜಟಾಸಮೂಹದಿಂದ ಕೂಡಿದವನೂ ಆದ ಆ ಪರಶುರಾಮನು ದ್ರವ್ಯವನ್ನು ಬೇಡುವುದಕ್ಕಾಗಿ ಬಂದ ದ್ರೋಣನನ್ನು ಚಿನ್ನದ ಪಾತ್ರೆಗಳಿಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

ಚಂ || ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ
ದಡೆಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ
ಲ್ಲೊಡಮೆ ಸಮಂತು ಪೇಳವರೊಳಾವುದನೀವುದೊ ಕುಂಭಸಂಭವ ||೧||

ಅರ್ಥ

ನನ್ನ ಪದಾರ್ಥಗಳನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುಗಳಿಗೆ ಕೊಟ್ಟೆನು. ಈಗ ನನ್ನಲ್ಲಿ ಒಡಂಬಡಿಕೆಯೂ ಇಲ್ಲ. ಬೇಡುವವನಾದರೋ ವೇದಪಾರಂಗತ . ಹೇಗೆ ಅವನನ್ನು ಸಂತೋಷಪಡಿಸಲಿ ? “ ದ್ರೋಣನೇ

ಈಗ ಇದೊಂದು ಬಿಲ್ಲೂ ಇದೊಂದು ದಿವ್ಯಾಸ್ತ್ರಗಳ ಸಮೂಹವೂ ಇದೆ. ಬೇರೆ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ ? ಚೆನ್ನಾಗಿ ಯೋಚಿಸಿ ಹೇಳು.” (ಎಂದು ಪರಶುರಾಮನು ದ್ರೋಣನಿಗೆ ಹೇಳಲಾಗಿ)

ವ || ಎಂಬುದುಂ ದ್ರೋಣನೆನಗೆ ವಿದ್ಯಾಧನಮೆ ಧನಮಪ್ಪುದರಿಂ ದಿವ್ಯಾಸ್ತ್ರಂಗಳಂ ದಯೆಗೆಯ್ವುದೆನೆ ವಾರಣವಾಯವ್ಯಾಗ್ನೇಯ ಪೌರಂದರಾದಿಪ್ರಧಾನಾಸ್ತ್ರಂಗಳಂ ಕುಡೆ ಕೊಂಡು ಪರಶುರಾಮನಂ ಬೀಳ್ಕೊಂಡು ತನ್ನೊಡನಾಡಿಯಪ್ಪ ಕೆಳೆಯಂ ದ್ರುಪದಂ ಛತ್ರಾವತಿಯೊಳರಸುಗೆಯ್ದುಪನೆಂದು ಕೇಳ್ದಾ ಪೊರಲ್ಗೆವಂದು ದ್ರುಪದನರಮನೆಯ ಬಾಗಿಲೊಳ್ ನಿಂದು ಪಡಿಯರನಂ ಕರೆದು ನಿಮ್ಮೊಡನಾಡಿದ ಕೆಳೆಯಂ ದ್ರೋಣನೆಂಬ ಪಾರ್ವ ಬಂದನೆಂದು ನಿಮ್ಮರಸಂಗರಿಯಿ ಪೇಳೆಂಬುದುಮಾತನಾ ಮಾಳ್ಕೆಯೊಳೆ ಬಂದರಿಪುವುದುಂ ದ್ರುಪದಂ ರಾಜ್ಯಮದಿರಾಮದೋನ್ಮತ್ತನುಂ ಗರ್ವಗ್ರಹವ್ಯಗ್ರಚಿತ್ತನುಮಾಗಿ ಮೇಗಿಲ್ಲದೆ _

ಅರ್ಥ:

ಎಂಬುದಾಗಿ ಹೇಳಲು ದ್ರೋಣನು ನನಗೆ ವಿದ್ಯಾದನವೇ ಧನವಾಗಿರುವುದುರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸಬೇಕು ಎನ್ನಲು ವಾರುಣ , ವಾಯುವ್ಯ, ಆಗ್ನೇಯ, ಐಂದ್ರಾದಿ ಅಸ್ತ್ರಗಳನ್ನು ಕೊಡಲು ಅದನ್ನು ತೆಗೆದುಕೊಂಡು ಪರಶುರಾಮನಿಂದ ಅಪ್ಪಣೆ ಪಡೆದು ತನ್ನ ಒಡನಾಡಿಯೂ ಸ್ನೇಹಿತನೂ ಆದ ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾನೆಂದು ಕೇಳಿ ಆ ಪಟ್ಟಣಕ್ಕೆ ಬಂದು ದ್ರುಪದನರಮನೆಯ ಬಾಗಿಲಲ್ಲಿ ನಿಂತು ಬಾಗಿಲು ಕಾಯುವವನನ್ನು ಕರೆದು ನಿಮ್ಮ ಜೊತೆಯಲ್ಲಾಟವಾಡಿದ ಸ್ನೇಹಿತನಾದ ದ್ರೋಣನೆಂಬ ಬ್ರಾಹ್ಮಣನು ಬಂದಿದ್ದಾನೆಂದು ನಿಮ್ಮ ರಾಜನಿಗೆ ತಿಳಿಯಪಡಿಸು ಎಂದನು. ಅವನು ಆ ರೀತಿಯಲ್ಲಿಯೇ ಬಂದು ತಿಳಿಸಲಾಗಿ ದ್ರುಪದನು ರಾಜ್ಯವೆಂಬ ಮದ್ಯದಿಂದ ಸೊಕ್ಕಿದವನೂ ಅಹಂಕಾರವೆಂಬ ಗ್ರಹದಿಂದ ಪೀಡಿತನಾದ ಮನಸ್ಸುಳ್ಳವನೂ ಆಗಿ ಒಳ್ಳೆಯ ನಡತೆಯಿಲ್ಲದೆ –

ಕಂ || ಅಂತೆಂಬನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ಳೆಂತೆನಗೆ ಕೆಳೆಯನೇ ನೂಂ
ಕಂತಪ್ಪನನರಿಯೆನೆಂದು ಸಭೆಯೊಳ್ ನುಡಿದಂ ||೨||

ಅರ್ಥ :

ಹಾಗೆನ್ನುವವನು ಯಾರ ಸಂಬಂಧಿ ? ಇದು ವಿಶೇಷ ಭ್ರಮೆಯಲ್ಲವೆ ? ದ್ರೋಣನೆಂಬುವವನು ಬ್ರಾಹ್ಮಣನೇ ಹೇಗೆ ? ನನಗೆ ಸ್ನೇಹಿತನೇ ಹೇಳು ? ಅಂತಹವನನ್ನು ನಾನು ತಿಳಿದಿಲ್ಲ. ಅವನನ್ನು ಹೊರಕ್ಕೆ ತಳ್ಳು ಎಂದು ಸಭಾ ಮಧ್ಯದಲ್ಲಿ ಕೆಟ್ಟ ಮಾತನಾಡಿದನು.

ವ || ಅಂತು ನುಡಿದುದಂ ಪಡಿಯರಂ ಬಂದಾಮಾಳ್ಕೆಯೊಳರಿಪೆ ದ್ರೋಣನೊತ್ತಂಬರದಿಂದೊಳಗಂ ಪೊಕ್ಕು ದ್ರುಪದನಂ ಕಂಡು _

ಹೀಗೆ ಹೇಳಿದುದನ್ನು ದ್ವಾರಪಾಲಕನು ಬಂದು ಆ ರೀತಿಯಲ್ಲಿ ತಿಳಿಸಲಾಗಿ ದ್ರೋಣನು ಒತ್ತಾಯದಿಂದ ಒಳಕ್ಕೆ ಪ್ರವೇಶಿಸಿ ದ್ರುಪದನನ್ನು ನೋಡಿ ,

ಚಂ || ಅರಿಯಿರೆ ನೀಮುಮಾಮುವೊಡನೋದಿದೆವೆಂಬುದನಣ್ಣ ನಿನ್ನ ನಾ
ನರಿಯೆನದೆಲ್ಲಿ ಕಂಡೆಯೊ ಮಹೀಪತಿಗಂ ದ್ವಿಜವಂಶ ಜಂಗಮೇ
ತರ ಕೆಳೆಯಿಂತು ನಾಣೆಲಿಗರಪ್ಪರೆ ಮಾನಸರೆಂಬ ಮಾತುಗಳ್
ನೆರೆಗೊಳೆ ಕುಂಭಸಂಭವನನಾ ದ್ರುಪದಂ ಕಡುಸಿಗ್ಗು ಮಾಡಿದಂ || ೩||

ಅರ್ಥ :

ಅಣ್ಣಾ ನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದುದನ್ನು ತಿಳಿದಿಲ್ಲವೇ ?ಎನ್ನಲು ದ್ರುಪದನು ನಿನ್ನನ್ನು ನಾನು ತಿಳಿದಿಲ್ಲ (ನೀನು ನನಗೆ ಅಪರಿಚಿತನು) ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ ? ಎಂಬ ಮಾತುಗಳಿಂದ ದ್ರೋಣನಿಗೆ ತೀವ್ರ ನಾಚಿಕೆಯಾಗುವಂತೆ ಹೀಯ್ಯಾಳಿಸಿದನು .

ವ|| ಅಂತು ಮಾಡಿದುದುಮಲ್ಲದೀ ನಾಣೆಲಿ ಪಾರ್ವನನೆರೆದು ಕಳೆಯಿಮೆಂಬುದುಂ ದ್ರೋಣನಿಂತೆಂದಂ –

ಅರ್ಥ : ಹಾಗೆ ಮಾಡಿದುದೂ ಅಲ್ಲದೆ ಈ ನಾಚಿಕೆಗೆಟ್ಟ ಬ್ರಾಹ್ಮಣನನ್ನು ಎಳೆದು ನೂಕು ಎನ್ನಲು ದ್ರೋಣನು ಹೀಗೆಂದನು.

ಚಂ || ನುಡಿ ತಡವಪ್ಪುದೊಂದು ಮೊಗದೊಳ್ ಮರುಕಂ ದೊರೆಕೊಳ್ವುದೊಂದು ನಾ
ಲ್ಗೆಡೆಗುಡದಿರ್ಪುದೊಂದು ನುಡಿಗಳ್ ಮೊರೆಯಂ ಮರೆಯಪ್ಪುದೊಂದು ಕ
ಳ್ಗುಡಿದವರಂದಮಿಂತು ಸಿರಿ ಸಾರ್ತರೆ ಸಾರ್ವುದದರ್ಕೆ ಸಂದೆಯಂ
ಬಡದೆ ಜಲಕ್ಕನೀಗಳರಿದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ || ೪||

ಅರ್ಥ :

ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತು ತೊದಲುವುದು. ಮುಖದಲ್ಲಿ ವಕ್ರ ಚೇಷ್ಟೆಯುಂಟಾಗುವುದು.ಮಾತುಗಳು ನಾಚಿಕೆಯಿಲ್ಲದಾಗುವವು. ಸಂಬಂಧವನ್ನು ಮರೆಯುವಂತೆ ಮಾಡುವುದು. ಆದುದದರಿಂದ ಐಶ್ವರ್ಯವು ಕಳ್ಳಿನೊಡನೆ ಹುಟ್ಟಿತು ಎಂಬುದನ್ನು ನಿಸ್ಸಂಶಯವಾಗಿ ಈಗ ವಿಶದವಾಗಿ ತಿಳಿದೆನು.

ವ || ಎಂದು ಸೈರಿಸದೆ –

ಅರ್ಥ : ಎಂದು ಹೇಳಿ ಅಷ್ಟಕ್ಕೆ ಸೈರಿಸಲಾಗದೆ –

ಚಂ|| ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ
ದಳವೊಡನೋದಿದೊಂದು ಬೆರಗಿಂಗೆ ಕೊಲಲ್ಕನಗಾಗದೀ ಸಭಾ
ವಳಯದೊಳೆನ್ನನೇರಿಸಿದ ನಿನ್ನನನಾಕುಳಮೆನ್ನ ಚಟ್ಟರಿಂ
ತಳವೆಳಗಾಗೆ ಕಟ್ಟಿಸದೆ ಮಾಣ್ಪೊಡೆ ಕೆಮ್ಮನೆ ಮೀಸೆವೊತ್ತೆನೇ ||೫||

ಅರ್ಥ :

ಎಲೋ ಖಳನೇ, ನೊಣಕ್ಕೆ ಕಸವೇ ಶ್ರೇಷ್ಠವಾದುದು. ಎನ್ನುವ ಗಾದೆಯ ಹಾಗೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾಮಂಡಲದಲ್ಲಿ ನನ್ನನ್ನು ಹೀಯ್ಯಾಳಿಸಿದ ನಿನ್ನನ್ನು ನಿರಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಮಾಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ ? ಎಂದು ದ್ರೋಣನು ದ್ರುಪದನಿಗೆ ಹೇಳಿದನು. (ಆಧಾರ –ಗದ್ಯಾನುವಾದ ಎನ್ ಅನಂತರಂಗಾಚಾರ್)